ಒಂದು ಚಂದದ ಕಾಲುಜ್ಜುವ ಚಪ್ಪಡಿಕಲ್ಲನ್ನು ಹಾಗು ಒಂದೆರಡು ಉಜ್ಜಲ್ಲನ್ನು ಬಸ್ಸಿಗೆ ಹಾಕಿಕೊಂಡು ಬಂದ. ತಾನಿರುವ ಹೊಸ ಮನೆಯ ಬಚ್ಚಲಿಗೆ ಎತ್ತಿಕೊಂಡು ಹೋಗಿ ಚಪ್ಪಡಿ ಕಲ್ಲನ್ನು ಹಾಸಿದ. ಶೆಲ್ಫಿನ ಮೇಲೆ ಉಜ್ಜಲ್ಲುಗಳನ್ನು ಜೋಡಿಸಿದ. ಮಾರನೆ ದಿನವೇ ಅದರ ಮೇಲೆ ಕೂತು ಆನಂದವಾಗಿ ಸ್ನಾನ ಮಾಡಿ ಆಫೀಸ್‌ಗೆ ಹೋದ.

ಹೆಂಡ್ತಿಯೊಂದಿಗಿನ ಸುಖ ದಾಂಪತ್ಯದ ನಾಲ್ಕೈದು ತಿಂಗಳು ಕಳೆದೋದಮೇಲೆ ಒಂದು ದಿನ ಕೆಂಪ ಸ್ನಾನಕ್ಕೆ ಕೂತಾಗ ಹೆಂಡ್ತಿಯನ್ನು ಬೆನ್ನುಜ್ಜಲು ಕರೆದ. ಈ ಹಿಂದೆ ಮಾಲತಿ ಗಂಡನ ಬೆನ್ನುಜ್ಜಿರಲಿಲ್ಲವೆಂದೇನಲ್ಲ. ಆದರೆ, ಆಗೆಲ್ಲ ಅದೊಂದು ಶೃಂಗಾರದ ರಸಗಳಿಗೆಯ ಮುಂದುವರೆದ ಭಾಗವಾಗಿ ಸೋಪು ನಾರು ಇತ್ಯಾದಿಯಲ್ಲಿ ಕೈಯಾಡಿಸಿ ಆಚೆ ಬರುತ್ತಿದ್ದಳು. ಆದರೆ, ಇಂದು ಕರೆದಾಗ ಕೆಂಪ ಹಿಂದಮಕ್ಕೆ ಮುಖ ಮಾಡಿಕೊಂಡು ಬೆನ್ನನ್ನು ತೋರಿಸುತ್ತ ಚಪ್ಪಡಿ ಕಲ್ಲಿನ ಮೇಲೆ ಮಟ್ಟಾಗಿ ಕೂತಿದ್ದನು. ಹೆಂಡತಿ ಒಳ ಬಂದ ತಕ್ಷಣ ತನ್ನ ಕೈನಲ್ಲಿದ್ದ ಉಜ್ಜಲ್ ಅನ್ನು ಹಿಂದಾಸಿ ಕೊಟ್ಟನು. ಇಂಥ ಉಜ್ಜಲ್‌ಗಳಿಗೆ ಮಾಲತಿ ಹೊಸಬಳಲ್ಲದಿದ್ದರೂ ತಾನು ಎಂದೂ ಸಹ ಇಂಥ ಕಲ್ಲುಗಳಿಗೆ ತನ್ನ ಮೈಯನ್ನು ಒಡ್ಡಿಕೊಂಡಿರಲಿಲ್ಲ. ಅಪ್ಪ ಹೋರಿ ಹನುಮಂತಣ್ಣ ತರಂತರದ ಸೋಪುಗಳನ್ನು ಮಗಳಿಗೆ ತಂದುಕೊಟ್ಟು ರೂಢಿ ಮಾಡಿಸಿದ್ದ. ಜೊತೆಗೆ ಅವಳು ಹೀಗೆ ವಾರಕ್ಕೊಂದಾವರ್ಥಿ ಸ್ನಾನದ ಗಿರಾಕಿಯಾಗಿರದೆ ದಿನಬಿಟ್ಟುದಿನ ಮೈಸ್ನಾನವನ್ನಾದರೂ ಮಾಡಿಯೇ ತೀರುತ್ತಿದ್ದವಳು. ಹಾಗಾಗಿ ಮಾಲತಿಗೆ ಎಂದೂ ಸಹ ಉಜ್ಜಲ್ಲಿನ ಅವಶ್ಯಕತೆ ಬಿದ್ದಂತಿರಲಿಲ್ಲ. ಆದರೆ, ಗಂಡ ಇಂದು ಅನಾಮತ್ ಉಜ್ಜಲ್ಲನ್ನು ಕೈಗೆ ಕೊಟ್ಟಾಗ ಅವಳಿಗೆ ಆಶ್ಚರ್ಯವಾಯಿತಾದರೂ 'ಇಲ್ಲ' ಎಂದು ಬೇಸರಿಸಲಾರದೆ ಸುಮ್ಮನೆ ಹೀಗೆ ಬಳುಕಾಡಿಸಿ ಆಚೆ ಬಂದಳು. ಕೆಂಪನಿಗೆ ಅಂದು ಅರ್ಧಂಬರ್ಧವಾಗಿ ಬೆನ್ನೆಲ್ಲ ಕರ್ಗೊಳೆಯಾದಂತಾಯಿತು. ತೋರಗೊಡದೆ ಆಫೀಸ್‌ಗೆ ಹೋಗಿ ಬಂದನು. ಅದೆ ಮುಂದಿನ ಮತ್ತೊಂದು ಭಾನುವಾರ ಮತ್ತೆ ಬೆನ್ನುಜ್ಜಲು ಕರೆದನು. ಒಳಬಂದ ಮಾಲತಿ ಗಂಡನ ಕೈಲಿದ್ದ ದಡಿಗಲ್ಲನ್ನು ನೋಡಿ ಅಲ್ಲೆ ಸೋತಂತಾದಳು. ಈ ಬಾರಿ ಕೆಂಪ ಏನಾದರೂ ಮಾಡಿ ನಚ್ಚಗಾಗುವ ಹಾಗೆ ಮಾರ್ಗದರ್ಶನ ನೀಡಿ ತಿಕ್ಕಿಸಿಕೊಳ್ಳಬೇಕೆಂದು ನಿರ್ಧರಿಸಿದ್ದನು. ಅವಳು ಉಜ್ಜುವಾಗ 'ಮೇಲೆ ಬಾ, ಇತ್ತ ಎಡಗಡೆಕೆ, ಅಲ್ಲಿ ಕೆಳಗೆ' ಹೀಗೆ ದಾರಿ ತೋರಿಸುತ್ತ ಉಜ್ಜಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಒಂದೆರಡು ಸುತ್ತಿಗೆ ಸಾಕಾದ ಹೆಂಡತಿ 'ನನ್ಕೈಲಿ ಆಗಲ್ಲ ಏನಾರ ಮಾಡ್ಕ ಹೋಗು' ಎಂದು ಆಚೆ ಬಂದಳು. ಕೆಂಪನೇ ಅಂದು ಪ್ರಯತ್ನ ಮೀರಿ ಎಡಗೈಲು, ಬಲಗೈಲು ಎಷ್ಟು ಸಾಧ್ಯವೋ ಅಷ್ಟು ಎಟಕಿಸಿಕೊಂಡು ತಾನೇ ತನ್ನ ಬೆನ್ನನ್ನು ಉಜ್ಜಿಕೊಳ್ಳಲು ಪ್ರಯತ್ನಿಸಿದನು. ಎಷ್ಟು ತೋತರು ನಡು ಬೆನ್ನು ಮಾತ್ರ ಅವನ ಕೈ ಅಳತೆಗೆ ಸಿಗಲೇ ಇಲ್ಲ.

ಅತ್ತ ಮುಂದಿನ ವಾರ ಮಗ ಸೊಸೆ ನೋಡಿಕೊಂಡು ಹೋಗಲು ಅವ್ವ ಟೌನಿಗೆ ಬಂದಿದ್ದಳು. ಅವ್ವ ಬಂದ ಖುಷಿಯಲ್ಲಿ ಮಗ ಸ್ನಾನಕ್ಕೆ ಕೂತೇ ಬಿಟ್ಟನು. ಅತ್ತ ಒಷ್ಟೊತ್ತು ಬಿಟ್ಟು 'ಯವ್ವಾ ಬಾ ಬೆನ್ನುಜ್ಜು' ಎಂದನು. ಅವ್ವ ಶಿವಮ್ಮಳಿಗೆ ಮನಸ್ಸು ಹಾತೊರೆಯಿತಾದರೂ ಹೊಸ ಹೆಣ್ಣುಗಂಡು ಹೆಂಡತಿಯೇ ಬೆನ್ನುಜ್ಜಲಿ ಎಂದು, 'ಪಾಪ ಕೆಂಪಣ್ಣ ಕರಿಯುತ್ತೆ ನೋಡವ್ವ' ಎಂದು ಸೊಸೆಗೆ ದಾಟಿಸಿದಳು. ಸೊಸೆ ಕೇಳಿಸಿದರೂ ಕೇಳಿಸಿಕೊಳ್ಳದವಳಂತೆ ಅಡುಗೆ ಮನೆಯಲ್ಲಿ ತಲ್ಲೀನಳಾಗಿದ್ದಳು. ಮತ್ತೆ ಕೆಂಪನ ಕರೆ ಬಂದಾಗ ಈಗಲೂ ಸೊಸೆ ಮೌನ ವಹಿಸಿರುವುದನ್ನು ಕಂಡು, ಅವ್ವಳೇ ಬಚ್ಚಲಿಗೆ ಹೋದಳು. ಕೆಂಪ ಕಾದು ಕಾದು ಸಾಕಾಗಿದ್ದನು. 'ಯಾಕ್ಲ ನಿನ್ನೆಂಡ್ರು ಕೈಲಿ ಬೆನ್ನುಜ್ಜಿಸ್ಕೆಣಕಾಗಲ್ವ' ಎಂದು ಅವ್ವ ತಿವಿದಳು. ಏನೂ ಮಾತಾಡದೆ ಅವ್ವಳ ಕೈಲಿ ಅದವಾಗಿ ಬೆನ್ನುಜ್ಜಿಸಿಕೊಂಡ.

ಏನಾದರೂ ಮಾಡಿ ಹೆಂಡ್ತಿಯಿಂದ ಬೆನ್ನುಜ್ಜಿಸಿಕೊಳ್ಳಲು ರೂಢಿಮಾಡಿಕೊಳ್ಳಬೇಕು ಎಂದು ಹೊಂಚು ಹಾಕುತ್ತಿರುವಾಗಲೇ , ಮಾಲತಿ ಒಂದು ದಿನ ಶಾಪಿಂಗ್‌ಗೆ ಹೋಗಿದ್ದಳು. ಅಲ್ಲಿ ಅವಳಿಗೆ ಉದ್ದಗೆ ಮುಳ್ಳು ಮುಳ್ಳಿನಂತಿದ ಬೆಲ್ಟಿನಾಕಾರದ ವಸ್ತುವೊಂದು ಸೆಳೆಯಿತು. ಅದರ ಉಪಯೋಗವೇನೆಂದು ಅಂಗಡಿಯವರನ್ನೇ ವಿಚಾರಿಸಿ ತಿಳಿದು ಮನೆಗೆ ತಂದು ಇಟ್ಟಳು. ಇನ್ನೊಂದು ದಿನ ಕೆಂಪ ಬೆನ್ನುಜ್ಜಲು ಕರೆದಾಗ 'ಅಲ್ಲೆ ಹ್ಯಾಂಗರ್‌ನಲ್ಲಿ ನೇತಾಡ್ತಿಲ್ವ, ಅದನ್ನ